**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** – 831/2024 **RW**–1

**ದಿಃ20.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ 2 ನೇ ಎದುರುದಾರ ಪರ ವಕೀಲರಾದ ಶ್ರೀಮತಿ ದೇಸಾಯಿ ರವರಿಂದ.**

ನಾನು ಈ ಅರ್ಜಿಯಲ್ಲಿ 2 ನೇ ಎದುರುದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಆರ 1 ಎಂದು ಎಂದು ಗುರ್ತಿಸಲಾಯಿತು

**ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಾದ ಶ್ರೀಮತಿ ಪಿಬಿಆರರವರಿಂದ.**

ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಪ್ರಮಾಣ ಪತ್ರವನ್ನು ವಕೀಲರು ತಯಾರು ಮಾಡಿದ್ದರಿಂದ ನನಗೆ ಮಾಹಿತಿ ಇಲ್ಲವೆಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ವಿಮೇ ಹಾಗೂ ಡಿಎಲ್ ಚಾಲ್ತಿಯಲ್ಲಿತ್ತು ಎಂದರೆ ಸರಿ. ದೋಷಾರೋಪಣೆ ಪಟ್ಟಿ ನಮ್ಮ ಕಂಪನಿಯ ವಿಮೇ ಹೊಂದಿರುವ ವಾಹನದ ಮೇಲೆ ಇದೆ ಎಂದರೆ ಸರಿ. ಇದರ connected case ಇನ್ಸೂರನ್ಸ ಕಂಪನಿಯ ಮೇಲೆ liability fix ಆಗಿದೆ ಎಂದರೆ ಸಾಕ್ಷಿ ಆಗಿದೆ ಎನ್ನುತ್ತಾರೆ. ಇದರಲ್ಲಿ ಅರ್ಜಿದಾರರು ಗಾಯಾಳು ಇದ್ದಾರೆ ಎಂದರೆ ಸರಿ. ಅರ್ಜಿದಾರರು ಸದೃಢವಾದ ನಂತರ ಅರ್ಜಿ ಸಲ್ಲಿಸಲು ಬರುತ್ತಾರೆಂದರೆ ಸಾಕ್ಷಿ ಸರಿ ಅಲ್ಲ ಎನ್ನುತ್ತಾರೆ. ಈ ಕೇಸನಲ್ಲಿ ಆದ ವಿಳಂಬವನ್ನು ನ್ಯಾಯಾಲಯವು ಮನ್ನಿಸಿ ಆದೇಶ ಮಾಡಿದೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಈ ಕೇಸನಲ್ಲಿ ವಿಳಂಬದ ವಿಚಾರಗಳು ಮಾನ್ಯ

4

ಮಾಡಲು ಅರ್ಹ ಅಲ್ಲವೆಂದರೆ ಸರಿಯಲ್ಲ. ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿ ಬರೆಸಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ